# ಮುಖ್ಯ ಚುನಾವಣಾಧಿಕಾರಿಯವರ ಕಚೇರಿ, ಕರ್ನಾಟಕ

ನಿರ್ವಾಚನ ನಿಲಯ, ಶೇಷಾದ್ರಿ ರಸ್ತೆ, ಬೆಂಗಳೂರು-560 001.

---

**ಸಂಖ್ಯೆ:** ಸಿಆಸುಇ/15/SVEEP/2023 **ದಿನಾಂಕ:** 19ನೇ ಜೂನ್ 2023

**ಸುತ್ತೋಲೆ**

ವಿಷಯ:- 2023-24ನೇ ಸಾಲಿನಲ್ಲಿ ರಾಜ್ಯದ ಎಲ್ಲಾ ಶಾಲೆ, ಕಾಲೇಜುಗಳಲ್ಲಿ ಮತದಾರರ ಸಾಕ್ಷರತಾ ಸಂಘ (E.L.C) ಮತ್ತು ಚುನಾವಣಾ ಜಾಗೃತಿ ಸಂಘಗಳಲ್ಲಿ (C.J.C) ಕಾರ್ಯಚಟುವಟಿಕೆಗಳನ್ನು ಅನುಷ್ಠಾನಗೊಳಿಸುವ ಕುರಿತು.

- - -

ಭಾರತ ಚುನಾವಣಾ ಆಯೋಗವು ನೂತನ ಮತ್ತು ಭವಿಷ್ಯದ ಯುವ ಮತದಾರರಲ್ಲಿ ಚುನಾವಣೆ ಮತ್ತು ಮತದಾನ ಪ್ರಕ್ರಿಯೆಗಳಿಗೆ ಸಂಬಂಧಿಸಿದಂತೆ ಜಾಗೃತಿ ಮೂಡಿಸುವ ಸಲುವಾಗಿ ವಿಶ್ವವಿದ್ಯಾಲಯಗಳು ಸೇರಿದಂತೆ ಎಲ್ಲಾ ಶೈಕ್ಷಣಿಕ ಸಂಸ್ಥೆಗಳಲ್ಲಿ **"ಮತದಾರರ ಸಾಕ್ಷರತಾ ಸಂಘ"** [Electoral Literacy Clubs] ಗಳನ್ನು ಹಾಗೂ ಪ್ರತಿ ವಿಧಾನಸಭಾ ಕ್ಷೇತ್ರದ ಮತಗಟ್ಟೆ ಕೇಂದ್ರಗಳಲ್ಲಿ ಚುನಾವಣಾ ಪಾಠಶಾಲೆ [ಚುನಾವಣಾ ಜಾಗೃತಿ ಸಂಘ] ಗಳನ್ನು ಈಗಾಗಲೇ ಸ್ಥಾಪಿಸಲಾಗಿದೆ. ಪ್ರತಿ ವರ್ಷವೂ ಮಾರ್ಗದರ್ಶಿಗಳನ್ವಯ ಕಾರ್ಯಚುಟವಟಿಕೆಗಳನ್ನು ಅನುಷ್ಠಾನಗೊಳಿಸಬೇಕಾಗಿರುತ್ತದೆ.

ಪೂರ್ವಭಾವಿಯಾಗಿ ರಾಜ್ಯ ಮಟ್ಟದಿಂದ ಬ್ಲಾಕ್ ಹಂತದವರೆಗೆ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ [ಡಯಟ್] ಗಳ ಉಸ್ತುವಾರಿಯಲ್ಲಿ ಕ್ಯಾಸ್ಕೆಡ್ ಮಾದರಿಯಲ್ಲಿ ಸಂಪನ್ಮೂಲ ವ್ಯಕ್ತಿಗಳು ಹಾಗೂ ಇ.ಎಲ್.ಸಿ/ಸಿ.ಜೆ.ಸಿ ಸಂಚಾಲಕರು/ಬಿ.ಎಲ್.ಓಗಳಿಗೆ ತರಬೇತಿಯನ್ನು ಫೆಬ್ರವರಿ 23 ರಿಂದ ಮೇ 2023 ರವರೆಗೆ ನೀಡಲಾಗಿರುತ್ತದೆ. ಈ ಕಾರ್ಯಕ್ರಮಕ್ಕೆ ಪೂರಕವಾಗಿ ಭಾರತ ಚುನಾವಣಾ ಆಯೋಗದಿಂದ ರಚಿತವಾದ **"ಇ.ಎಲ್.ಸಿ. ಸಂಪನ್ಮೂಲ ಮಾರ್ಗದರ್ಶಿ"** ಸಾಹಿತ್ಯ ಸಾಮಗ್ರಿಗಳನ್ನು ಕನ್ನಡಕ್ಕೆ ಭಾಷಾಂತರಿಸಿ, ಎಲ್ಲಾ ಇ.ಎಲ್.ಸಿ ಕೇಂದ್ರಗಳಿಗೆ 2018-19 ನೇ ಸಾಲಿನಲ್ಲಿ ಸರಬರಾಜು ಮಾಡಲಾಗಿದೆ. ಪ್ರತಿ ವರ್ಷವೂ ಜಿಲ್ಲಾ SVEEP ಸಮಿತಿಯ ಅಧ್ಯಕ್ಷರು ಮತ್ತು ನೋಡಲ್ ಅಧಿಕಾರಿಗಳ ಮಾರ್ಗದರ್ಶನ ಹಾಗೂ ಡಯಟ್‌ಗಳ ಉಸ್ತುವಾರಿಯಲ್ಲಿ ಸೂಚಿತ ಕಾರ್ಯಚಟುವಟಿಕೆಗಳನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಬೇಕಾಗಿರುತ್ತದೆ.

2023-24ನೇ ಸಾಲಿನಲ್ಲಿ ರಾಜ್ಯದ ಎಲ್ಲಾ ಶೈಕ್ಷಣಿಕ ಸಂಸ್ಥೆ (ಪ್ರೌಢಶಾಲೆ ಮತ್ತು ಅದರ ಮೇಲ್ಪಟ್ಟು) / ಚುನಾವಣಾ ಜಾಗೃತಿ ಸಂಘಗಳಲ್ಲಿ ಅನುಕ್ರಮವಾಗಿ ಮತದಾರರ ಸಾಕ್ಷರತಾ ಸಂಘಗಳು / ಚುನಾವಣಾ ಜಾಗೃತಿ ಸಂಘಗಳ ಮೂಲಕ ಸಂಪನ್ಮೂಲ ಸಾಹಿತ್ಯದ ಮಾರ್ಗಸೂಚಿಗಳನ್ವಯ ತರಗತಿ/ಮಾಹೆವಾರು ಸೂಚಿತ ಕಾರ್ಯಚಟುವಟಿಕೆಗಳನ್ನು ಅನುಷ್ಠಾನಗೊಳಿಸಬೇಕಾಗಿರುತ್ತದೆ. ಇದಕ್ಕೆ ಸಂಬಂಧಿಸಿದಂತೆ ವೇಳಾಪಟ್ಟಿಯನ್ನು ಪ್ರೌಢ ಶಾಲೆ / ಪದವಿ ಪೂರ್ವ ಕಾಲೇಜುಗಳಿಗೆ ಅನುಬಂಧ-1 ರಲ್ಲಿ, ಕಾಲೇಜು/ ಸ್ನಾತಕೋತ್ತರ/ ತಾಂತ್ರಿಕ ವಿದ್ಯಾಲಯಗಳಲ್ಲಿ ಅನುಬಂಧ-2 ಮತ್ತು ಚುನಾವಣಾ ಜಾಗೃತಿ ಸಂಘಗಳಿಗೆ ಅನುಬಂಧ-3 ರಲ್ಲಿ ವಿವರವಾದ ಮಾಹಿತಿಯನ್ನು ಲಗತ್ತಿಸಲಾಗಿದೆ.

ಮತದಾರರ ಸಾಕ್ಷರತಾ ಸಂಘಗಳಿಗೆ ಮತ್ತು ಚುನಾವಣಾ ಜಾಗೃತಿ ಸಂಘಗಳಿಗೆ ಸಂಬಂಧಿದಂತೆ 2023–24 ನೇ ಸಾಲಿನಲ್ಲಿ ಅನುಷ್ಠಾನಗೊಳಿಸಬೇಕಾದ ಕಾರ್ಯಚಟುವಟಿಕೆಗಳ ವಿವರಗಳನ್ನು ಅನುಬಂಧ–4 ರಲ್ಲಿ ಮತ್ತು ಅನುಬಂಧ 5 ರಲ್ಲಿ ವಿವರಿಸಿದೆ.

ಅನುಬಂಧ 1 ರಿಂದ 6 ರಲ್ಲಿರುವ ವಿವರಗಳ ಕಾರ್ಯಕ್ರಮಗಳೊಂದಿಗೆ ಮತದಾರರ ಸಾಕ್ಷರತಾ ಸಂಘಗಳ ಮತ್ತು ಚುನಾವಣಾ ಜಾಗೃತಿ ಸಂಘಗಳು ಈ ಕೆಳಕಂಡ ಕ್ರಮಗಳನ್ನು ಅಳವಡಿಸಿಕೊಳ್ಳುವುದು:–

1. **ದಾಖಲೀಕರಣ:–**

   ಶಾಲೆ/ಕಾಲೇಜುಗಳ ಇಎಲ್‌ಸಿ ಕೇಂದ್ರಗಳು / ಸಿಜೆಸಿಗಳು ಸೇರಿದಂತೆ, ಎಲ್ಲಾ ಹಂತಗಳಲ್ಲಿ ನಿರ್ವಹಿಸುವ ಕಾರ್ಯಚಟುವಟಿಕೆಗಳು ಮತ್ತು ಸ್ಪರ್ಧೆಗಳಿಗೆ ಸಂಬಂಧಿಸಿದಂತೆ ಆಯ್ದ ಅತ್ಯುತ್ತಮ ಗುಣಮಟ್ಟದ ಛಾಯಾಚಿತ್ರಗಳು, ದಿನಪತ್ರಿಕೆ/ ಮಾಸ ಪತ್ರಿಕೆಗಳ ತುಣುಕುಗಳನ್ನು ಸಂಬಂಧಿಸಿದ ಸೂಕ್ತ ಅಡಿಬರಹದೊಂದಿಗೆ ಇಮೇಲ್‌ನಲ್ಲಿ ಮಾತ್ರ ಸಂಕ್ಷಿಪ್ತ ವರದಿಯನ್ನು (ಕನ್ನಡ ಮತ್ತು ಆಂಗ್ಲ ಭಾಷೆಯಲ್ಲಿ) ಒಂದು ಪುಟ ಸಿದ್ಧಪಡಿಸಿ **Word Document** ನಲ್ಲಿ consveep@gmail.com ಇ–ಮೇಲ್ ವಿಳಾಸಕ್ಕೆ ಕಳುಹಿಸುವುದು.

2. **ಅನುಪಾಲನಾ ಕ್ರಮಗಳು:–**

   ಆಯೋಗದ ವತಿಯಿಂದ ಕಾಲಕಾಲಕ್ಕೆ ಸಂಪನ್ಮೂಲ ವ್ಯಕ್ತಿಗಳು, ಉಸ್ತುವಾರಿ ಅಧಿಕಾರಿಗಳ ಸಭೆ, ವಿಡಿಯೋ ಕಾನ್ಫರೆನ್ಸ್‌ಗಳ ಮೂಲಕ ಸಮಾಲೋಚನೆ ನಡೆಸಿ, ಅಗತ್ಯ ಅನುಪಾಲನೆಗೆ ಕ್ರಮವಹಿಸಲಾಗುವುದು.

3. **ನಿಯತ ಕಾಲಿಕ ವರದಿ ಸಲ್ಲಿಸುವಿಕೆ:–**

   ಇಎಲ್‌ಸಿ/ಸಿಜೆಸಿ ಕಾರ್ಯಚಟುವಟಿಕೆಗಳ ಅನುಷ್ಠಾನ ಮತ್ತು ಪ್ರಗತಿಗೆ ಸಂಬಂಧಿಸಿದಂತೆ, ಇಎಲ್‌ಸಿ ಗೂಗಲ್ ಸ್ಪ್ರೆಡ್‌ಶೀಟ್/ಎಕ್ಸೆಲ್ ನಿಗದಿತ ನಮೂನೆಗಳಲ್ಲಿ **ಪ್ರತಿ ತಿಂಗಳು 6ನೇ ತಾರೀಖಿನೊಳಗೆ ಕಡ್ಡಾಯವಾಗಿ ಮಾಹಿತಿಯನ್ನು ಸಲ್ಲಿಸುವುದು.**

4. **ಅಧಿಕಾರಿಗಳ ಜವಾಬ್ದಾರಿಗಳು:–**

   ಎಲ್ಲಾ ಹಂತದ ಉಸ್ತುವಾರಿ ಅಧಿಕಾರಿಗಳು ಸೂಚಿತ ಕಾರ್ಯಚಟುವಟಿಕೆಗಳನ್ನು ಅನುಷ್ಠಾನಗೊಳಿಸುವುದು ಹಾಗೂ ಭೇಟಿಯ ಸಮಯದಲ್ಲಿ ಪರಿಶೀಲಿಸಿ, ಸಂದರ್ಶನ ವರದಿಯಲ್ಲಿ ನಮೂದಿಸುವುದು ಮತ್ತು ಇಎಲ್‌ಸಿ/ಸಿಜೆಸಿ ಕಾರ್ಯಕ್ರಮಗಳು ಪರಿಣಾಮಕಾರಿಯಾಗಿ, ಪೂರ್ಣಪ್ರಮಾಣದಲ್ಲಿ ಯಶಸ್ವಿಗೊಳಿಸಲು ಕ್ರಮವಹಿಸುವುದು.

ಎಲ್ಲಾ ಜಿಲ್ಲಾ ಚುನಾವಣಾಧಿಕಾರಿಗಳು ಹಾಗೂ ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾ SVEEP ನೋಡಲ್ ಅಧಿಕಾರಿಗಳು ಹಾಗೂ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಜಿಲ್ಲಾ ಪಂಚಾಯತ್ ಇವರುಗಳು ಇದರೊಂದಿಗೆ ಲಗತ್ತಿಸಿರುವ ಅನುಬಂಧ 1 ರಿಂದ 6 ರಲ್ಲಿ ಸೂಚಿಸಿರುವಂತೆ ಮತದಾರರ ಸಾಕ್ಷರತಾ ಸಂಘಗಳಲ್ಲಿ ಮತ್ತು ಚುನಾವಣಾ ಜಾಗೃತಿ ಸಂಘಗಳಲ್ಲಿ ಕ್ರಮ ಜರುಗಿಸಲು ಸಂಬಂಧಪಟ್ಟವರಿಗೆ ಸೂಕ್ತ ನಿರ್ದೇಶನ ನೀಡಲು ಹಾಗೂ ಮೇಲ್ವಿಚಾರಣೆ ಮಾಡಿ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನಿರ್ವಹಿಸಲು ಕೋರಿದೆ.

ತಮ್ಮ ನಂಬುಗೆಯ

**(ರಾಜೇಂದ್ರ ಚೋಳನ್.ಪಿ)** ಭಾ.ಆ.ಸೇ

ಅಪರ ಮುಖ್ಯ ಚುನಾವಣಾಧಿಕಾರಿಗಳು

ಸಿ.ಆ.ಸು.ಇ (ಚುನಾವಣೆಗಳು)

**ಪ್ರತಿಯನ್ನು ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ:–**

1. ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳ ಮಾನ್ಯ ಕುಲಪತಿಗಳು,

2. ಮಾನ್ಯ ಕುಲಪತಿಗಳು, ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ, ಬೆಳಗಾವಿ.
3. ಮಾನ್ಯ ಕುಲಪತಿಗಳು, ರಾಜೀವ್‌ಗಾಂಧಿ ಆರೋಗ್ಯ ವಿಶ್ವವಿದ್ಯಾಲಯ, ಬೆಂಗಳೂರು
4. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ವೈದ್ಯಕೀಯ ಶಿಕ್ಷಣ ಇಲಾಖೆ
5. ಜಿಲ್ಲಾ ಚುನಾವಣಾಧಿಕಾರಿಗಳು ಹಾಗೂ ಮುಖ್ಯ ಆಯುಕ್ತರು, ಬಿ.ಬಿ.ಎಂ.ಪಿ. ಬೆಂಗಳೂರು
6. ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ.
7. ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಮಲ್ಲೇಶ್ವರ 18ನೇ ಸಂಪಿಗೆ ರಸ್ತೆ, ಬೆಂಗಳೂರು
8. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು,
9. ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು,
10. ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ,
11. ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಅರಮನೆ ರಸ್ತೆ, ಬೆಂಗಳೂರು.
12. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ ಮತ್ತು ಕಲಬುರಗಿ,
13. ಎಲ್ಲಾ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಚುನಾವಣಾಧಿಕಾರಿಗಳು,
14. ಎಲ್ಲಾ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಹಾಗೂ SVEEP ನೋಡಲ್ ಅಧಿಕಾರಿಗಳು,
15. ಸಾರ್ವಜನಿಕ ಶಿಕ್ಷಣ ಇಲಾಖೆಯ ನಿರ್ದೇಶಕರು [ಪ್ರಾಥಮಿಕ ಶಿಕ್ಷಣ] [ಪ್ರೌಢಶಿಕ್ಷಣ] ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ ಮತ್ತು ಡಿ.ಎಸ್.ಇ.ಆರ್.ಟಿ. ಹಾಗೂ ವಿಭಾಗೀಯ ಇಎಲ್‌ಸಿ ನೋಡಲ್ ಅಧಿಕಾರಿಗಳು,
16. ನಿರ್ದೇಶಕರು, ಅಪರ ಆಯುಕ್ತಾಲಯ, ಕಲಬುರಗಿ ಮತ್ತು ಧಾರವಾಡ. ಹಾಗೂ ವಿಭಾಗೀಯ ಇಎಲ್‌ಸಿ ನೋಡಲ್ ಅಧಿಕಾರಿಗಳು,
17. ಸಹ ನಿರ್ದೇಶಕರು [ಆಡಳಿತ] ಸಾರ್ವಜನಿಕ ಶಿಕ್ಷಣ ಇಲಾಖೆ, ಪದವಿ ಪೂರ್ವ ಶಿಕ್ಷಣ ಮಂಡಳಿ, ಬೆಂಗಳೂರು
18. ಎಲ್ಲಾ ಜಿಲ್ಲೆಗಳ ಉಪನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ,
19. ರಾಜ್ಯದ ಎಲ್ಲಾ ಡಯಟ್ ಪ್ರಾಂಶುಪಾಲರುಗಳು.
20. ಎಲ್ಲಾ ಜಿಲ್ಲೆಗಳ ಉಪನಿರ್ದೇಶಕರು [ಆಡಳಿತ] ಮತ್ತು [ಅಭಿವೃದ್ಧಿ] ಸಾರ್ವಜನಿಕ ಶಿಕ್ಷಣ ಇಲಾಖೆ,
21. ಎಲ್ಲಾ ತಹಸೀಲ್ದಾರರು, ಕಂದಾಯ ಇಲಾಖೆ, ಕರ್ನಾಟಕ ರಾಜ್ಯ,
22. ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸಾರ್ವಜನಿಕ ಶಿಕ್ಷಣ ಇಲಾಖೆ,
23. ಕಛೇರಿ ಪ್ರತಿ/ರಕ್ಷಾ ಕಡತಕ್ಕೆ.

ಈ ಕಛೇರಿ ಪತ್ರ ಸಂಖ್ಯೆ ಸಿಆಸುಇ/15/SVEEP/2023 ದಿನಾಂಕ: 19ನೇ ಜೂನ್ 2023ರ ಅನುಬಂಧ – 1

| Electoral Literacy Clubs Action Plan for the Year 2023-24 ; Calendar of Events – Class /Level wise (High school & Pre-University) | | | | | | | | | |
|---|---|---|---|---|---|---|---|---|---|
| Month | Period | IX | Duration in minutes | X | Duration in minutes | XI | Duration | XII | Duration |
| Jun 23 | 1 | Democracy Wall – the Wall mgazine | 60 min discussion on layout | Democracy Wall – the Wall Magazine | 60 min class discussion on layout | Democracy Wall – the Wall Magazine | 60min Class discussion on layout | Democracy Wall – the Wall Magazine | 60min |
| | 2 | Nirvachitra - Film show | 45 min | Nirvachitra -Film Show | 45 min | Card Game on Nomination | 45min | Nirvachitra - Film Show | 45min |
| Jul 23 | 3 | Card Game on Voting | 45 min | Registration Field Assignment | 30min briefing Home Assignmen | Model Matdaan: Election Simulation | 60min | Lok Sabha Film Screening | 60 min |
| Aug 23 | 4 | Visit To Gram Panchayat | 60-120 min | Knowing NOTA | 30 min | Film Show | 60-120 min | Know Your Candidate | 30 min Briefing<br><br>60 min presentation |
| Sep 23 | 5 | NVD Activity – School Play | 60 min | Step up | 60 min | Chunav Yantra and Build the Ballot | 60min | Filling Form 6 and enrolling as electors Visit to villages along with BLO's | 30 min |
| | 6 | | | NVD-Competition | 60 min | NVD Competition | 60min | Word Games | 30 min |
| Oct 23 | 7 | Technology / Apps/Falicitate students who have enrolled more voters at taluk level. NVD Activity | | | | | | | 60 minutes |

**Note:**

1. Please refer the Resource Guides provided by the CEO-Karnataka.
2. Suggested activites to be organised on National Voters' Day (January 25th) at all levels. Prizes may be distributed to the winners at the School/Block and District Level
3. List of the district level winners [event wise] to be sent by e-mail :

ಈ ಕಛೇರಿ ಪತ್ರ ಸಂಖ್ಯೆ ಸಿಆಸುಇ/15/SVEEP/2023 ದಿನಾಂಕ: 19ನೇ ಜೂನ್ 2023ರ ಅನುಬಂಧ – 2

| Electoral Literacy Clubs Action Plan for the Year 2023-24 ; Calendar of Events – Class wise/Level wise college/ Post graduation and Technical institution level | | | | | |
|---|---|---|---|---|---|
| ODD Semester | | | EVEN Semester | | |
| Month | Class | Colleges / Post graduate/ Technical instituion | Month | Class | Colleges/Postgraduate/ Technical instituion |
| July 23 | 1 | Democracy Wall – the Wall Magazine | Jan 24 | 1 | Celebration of National Voters' Day |
| | 2 | Election of new ELC Executive Committee | | | |
| | 3 | Ballot Bistro | | 2 | Motivators Invite |
| | 4 | Freshers' Debate | Feb 24 | 3 | Film Screening |
| Aug 23 | 5 | Rap Battle | | | |
| | 6 | Poetry Slam | Mar 24 | 4 | CEO's visit |
| | 7 | Mime Act | Apr 24 | 5 | Ballot Bistron |
| Sep 23 | 8 | Filling Form 6 and enrolling as electors & maze game | May 24 | 6 | Registration Drive for 18+ students Regular activities |
| | 9 | Ballot Bistro | | 5 | |
| | 10 | Motivators Invite | | | |
| | 11 | Photography Contest | | | |
| Oct 23 | 12 | Art Contest | | | |
| | 13 | Motivators Invite | | 6 | Wall Magazine & Featured Story in College Magazine |
| Nov 23 | 14 | Preparations for National Voters' Day | | | |
| | 15 | Announcement of Short Filmmaking Contest Regular activities | | 7 | |
| | 16 | Wall Magazine & Featured Story in College Magazine | | | |

**Note:**

1. Please refer the Resource Guides provided by the CEO-Karnataka.
2. Suggested activites to be organised on National Voters' Day (January 25th) at all levels. Prizes may be distributed to the winners at the School/Block and District Level
3. List of the district level winners [event wise] to be sent by e-mail :

| Jagruthi Clubs Action Plan for the Year 2023-24 ; Calendar of Events – Class wise/Level wise | | |
|---|---|---|
| Month | Class | Topic |
| June 23 | 1 | Soochi ki Tayaari followed by Game Matdaan ke Padav Model Matdaan: |
| | 2 | Model Matdaan: Election Simulation |
| July 23 | 3 | Card Game on Nomination followed by Gram Sabha ki Yatra |
| | 4 | Nirvachitra followed by Game: Snakes & Ladders Rangoli Making on Informed and Ethical Voting |
| Aug 23 | 5 | Nirvachitra/Scroll followed by Game: Varnawali |
| | 6 | Chunav Yantra& Build your Ballot followed by NOTA ko Janey |
| Sep 23 | 7 | Chunav Yantra - (EVM & VVPAT) Voter Quiz Contest |
| | 8 | Aao Panjikaran Karein followed by Game- Khojo toh Janey |
| Oct 23 | 9 | Chunav Ki Kahaniyan followed by Game – Ludo on Accessibility & Inclusion |

**Note:**

1. Please refer the Resource Guides provided by the CEO-Karnataka.
2. Suggested activites to be organised on National Voters' Day (January 25th) at all levels. Prizes may be distributed to the winners at the School/Block and District Level
3. List of the district level winners [event wise] to be sent by e-mail:

**Special instructions:-** The Annexure-3 should be implemented in all the ELCs.

**ಈ ಕಛೇರಿ ಪತ್ರ ಸಂಖ್ಯೆ ಸಿಆಸುಇ/15/SVEEP/2023 ದಿನಾಂಕ: 19ನೇ ಜೂನ್ 2023ರ ಅನುಬಂಧ – 4**

2023–24 ನೇ ಸಾಲಿನಲ್ಲಿ ಮತದಾರರ ಸಾಕ್ಷರತಾ ಸಂಘಗಳಲ್ಲಿ ಅನುಷ್ಠಾನಗೊಳಿಸಬೇಕಾದ ಕಾರ್ಯಚಟುವಟಿಕೆಗಳ ವಿವರಗಳು

**1. ಇ.ಎಲ್.ಸಿ. ಕೇಂದ್ರಗಳನ್ನು ಮುಂದುವರೆಸುವುದು ಹಾಗೂ ಹೊಸದಾಗಿ ಸ್ಥಾಪಿಸುವುದು ಹಾಗೂ ಅರ್ಹ ಸದಸ್ಯರುಗಳ ನೋಂದಣಿ ಪ್ರಕ್ರಿಯೆ:–**

| | |
|---|---|
| ಅ | 2023–24ನೇ ಸಾಲಿಗೆ ಎಲ್ಲಾ ಸರ್ಕಾರಿ/ಅನುದಾನಿತ/ಖಾಸಗಿ ಶೈಕ್ಷಣಿಕ ಸಂಸ್ಥೆಗಳಲ್ಲಿ (ಪ್ರೌಢಶಾಲೆಯಿಂದ ಮೇಲ್ಪಟ್ಟು) ಈಗಾಗಲೇ ಪ್ರಾರಂಭವಾಗಿರುವ ಮತದಾರರ ಸಾಕ್ಷರತಾ ಸಂಘಗಳನ್ನು [ಇಎಲ್.ಸಿ] ಮುಂದುವರೆಸುವುದು ಮತ್ತು ಹೊಸದಾಗಿ ಪ್ರಾರಂಭಿಸಬೇಕಾಗಿರುವ ಕಡೆ ಕಡ್ಡಾಯವಾಗಿ ಪ್ರಾರಂಭಿಲು ಕ್ರಮ ಜರುಗಿಸುವುದು. |
| ಆ | ಭಾರತ ಚುನಾವಣಾ ಆಯೋಗದ [ಇ.ಸಿ.ಐ] ವೆಬ್‌ಸೈಟ್‌ನಲ್ಲಿ ಇನ್ನೂ ನೋಂದಣಿಯಾಗದೆ ಇರುವ ಹಾಗೂ ಹೊಸದಾಗಿ ಪ್ರಾರಂಭಿಸುವ ಇಎಲ್.ಸಿ ಗಳನ್ನು ಆನ್‌ಲೈನ್ ಮೂಲಕ ನೋಂದಣಿ ಮಾಡುವುದು. (www.ecisveep.nic.in/clubs) |
| ಇ | 2023–24 ನೆ ಸಾಲಿನಲ್ಲಿ 9ನೇ ತರಗತಿಗೆ ಪ್ರವೇಶ ಪಡೆದ ವಿದ್ಯಾರ್ಥಿಗಳನ್ನು ಹಾಗೂ ಮೇಲ್ಪಟ್ಟ ಎಲ್ಲಾ ಹಂತದ ವಿದ್ಯಾರ್ಥಿಗಳು ಸದಸ್ಯರಾಗಿಲ್ಲದೆ ಇದ್ದರೆ ಅಂತಹವರುಗಳನ್ನು ಆಯಾ ಇ.ಎಲ್.ಸಿ.ಕೇಂದ್ರದ ಸದಸ್ಯರನ್ನಾಗಿ ನಿಗದಿತ ನಮೂನೆಯ ಅನ್ವಯ ನೋಂದಾಯಿಸುವುದು. |
| ಈ | 2023–24ನೇ ಸಾಲಿನಲ್ಲಿ ಶೈಕ್ಷಣಿಕ ಸಂಸ್ಥೆಗಳಲ್ಲಿ ಇ.ಎಲ್.ಸಿ.ಗಳನ್ನು ಪ್ರಾರಂಭಿಸಿದ್ದಲ್ಲಿ, ಅಂತಹ ಇ.ಎಲ್.ಸಿ. ಕೇಂದ್ರಗಳಲ್ಲಿಯೂ ಅರ್ಹವಿದ್ಯಾರ್ಥಿಗಳನ್ನು ನೋಂದಣಿ ಮಾಡಿಸುವುದು. |

**2. ಇ.ಎಲ್.ಸಿ/ಸಿ.ಜೆ.ಸಿ ಸಂಚಾಲಕರ ತರಬೇತಿ ಕಾರ್ಯಕ್ರಮ:–**

| | |
|---|---|
| ಅ | 2022–23ನೇ ಸಾಲಿನಲ್ಲಿ ಎಲ್ಲಾ ಇ.ಎಲ್.ಸಿ/ಸಿ.ಜೆ.ಸಿ ಸಂಚಾಲಕರು/ ಬಿ.ಎಲ್.ಓಗಳಿಗೆ ತರಬೇತಿಯನ್ನು ನೀಡಲು ಸೂಚಿಸಲಾಗಿತ್ತು. ಆದರೆ ಕೆಲವು ಕಡೆ ವಿವಿಧ ಕಾರಣಗಳಿಂದ ಪೂರ್ಣ ಪ್ರಮಾಣದಲ್ಲಿ ನೀಡಲು ಸಾಧ್ಯವಾಗಿರುವುದಿಲ್ಲ. ಈ ಹಿನ್ನೆಲೆಯಲ್ಲಿ ಬ್ಲಾಕ್ ಮತ್ತು ಜಿಲ್ಲೆಗಳಲ್ಲಿ ತರಬೇತಿ ಪಡೆಯದಿರುವ ಇ.ಎಲ್.ಸಿ ಸಂಚಾಲಕರು, ರಾಯಭಾರಿಗಳಿಗೆ / ಸಿ.ಜೆ.ಸಿ. ಸಂಚಾಲಕರು, ಬಿ.ಎಲ್.ಓ.ಗಳಿಗೆ ತರಬೇತಿಯನ್ನು ಆಯಾ ಹಂತದಲ್ಲಿ ಆಯೋಜಿಸಿ ಪೂರ್ಣಗೊಳಿಸಲು ಅಗತ್ಯ ಕ್ರಮವಹಿಸುವುದು. |
| ಆ | ಹೊಸದಾಗಿ ಪ್ರಾರಂಭಿಸುತ್ತಿರುವ ಇ.ಎಲ್.ಸಿ/ಸಿ.ಜೆ.ಸಿ ಕೇಂದ್ರಗಳ ಸಂಚಾಲಕರು ಮತ್ತು ಬಿ.ಎಲ್.ಓ.ಗಳಿಗೂ ಸಹ ತರಬೇತಿಯನ್ನು ನೀಡುವುದು. |

**3. ಸಂಪನ್ಮೂಲ ಮಾರ್ಗದರ್ಶಿ ಸಾಹಿತ್ಯ ಪೂರೈಕೆ:–**

| | |
|---|---|
| ಅ | 2018–19ನೇ ಸಾಲಿನಲ್ಲಿ ಈಗಾಗಲೇ ಎಲ್ಲಾ ಇ.ಎಲ್.ಸಿ/ಸಿ.ಜೆ.ಸಿ ಕೇಂದ್ರಗಳಿಗೆ ಸಂಪನ್ಮೂಲ ಮಾರ್ಗದರ್ಶಿ ಸಾಹಿತ್ಯಗಳನ್ನು [ಕನ್ನಡ ಆವೃತ್ತಿ] ಸರಬರಾಜು ಮಾಡಲಾಗಿರುತ್ತದೆ. |
| ಆ | ಜಿಲ್ಲಾ SVEEP ನೋಡಲ್ ಅಧಿಕಾರಿಗಳು, ಆಯಾ ಉಪನಿರ್ದೇಶಕರುಗಳು, ಶಿಕ್ಷಣ ಇಲಾಖೆ ಹಾಗೂ ಬಿ.ಎಲ್.ಎಂ.ಟಿ/ ಡಿ.ಎಲ್.ಎಂ.ಟಿಗಳು ಇವುಗಳ ಸಂರಕ್ಷಣೆ ಹಾಗೂ ಬಳಕೆಯ ಬಗ್ಗೆ ಪರಿಶೀಲಿಸಿವುದು. |

4. ಇ.ಎಲ್.ಸಿ ಕಾರ್ಯಚಟುವಟಿಕೆಗಳ ಅನುಷ್ಠಾನ:–

| | |
|---|---|
| ಅ | ತರಗತಿವಾರು ಆಯಾ ಮಾಹೆಗಳಲ್ಲಿ ಸೂಚಿತ ಕಾರ್ಯಚಟುವಟಿಕೆಗಳನ್ನು ಸಂಘಗಳ ಸಂಚಾಲಕರ ನೇತೃತ್ವದಲ್ಲಿ ನಿರ್ವಹಿಸತಕ್ಕದ್ದು. ಪಠ್ಯಕ್ರಮದ ವಿವರಗಳನ್ನು ಪ್ರೌಢಶಾಲೆ/ ಪದವಿ ಪೂರ್ವ ಕಾಲೇಜುಗಳಿಗೆ ಅನುಬಂಧ–1 ರಲ್ಲಿ, ಪದವಿ/ಸ್ನಾತಕೋತ್ತರ/ತಾಂತ್ರಿಕ ಸಂಸ್ಥೆಗಳಿಗೆ ಅನುಬಂಧ–2 ರಲ್ಲಿ ನೀಡಲಾಗಿದೆ. |
| ಆ | ಇದಕ್ಕೆ ಸಂಬಂಧಿಸಿದಂತೆ ಅಗತ್ಯ ಮಾರ್ಗದರ್ಶನವನ್ನು ಆಯಾ ಬ್ಲಾಕ್/ಜಿಲ್ಲೆಯ ಸಂಪನ್ಮೂಲ ವ್ಯಕ್ತಿಗಳು [ಬಿ.ಎಲ್.ಎಂ.ಟಿ/ ಡಿ.ಎಲ್.ಎಂ.ಟಿ] ನೀಡುವುದು ಹಾಗೂ ಅನುಪಾಲನೆ ಮಾಡುವುದು. |

5. ರಾಷ್ಟ್ರೀಯ ಮತದಾರರ ದಿನ [National Voters' Day] ಆಚರಣೆ:–

| | |
|---|---|
| ಅ | ನಮ್ಮ ದೇಶವು ವಿಶ್ವದಲ್ಲಿಯೇ ಅತ್ಯಂತ ಬೃಹತ್ ಪ್ರಜಾಸತ್ತಾತ್ಮಕ ರಾಷ್ಟ್ರವಾಗಿದ್ದು, ಚುನಾವಣೆ ಮತ್ತು ಮತದಾನ ಪ್ರಕ್ರಿಯೆಗಳು ಜನಪ್ರತಿನಿಧಿಗಳ ಮೂಲಕ ಪ್ರಜೆಗಳೇ ಸರ್ಕಾರವನ್ನು ರಚಿಸುವ ವಿಶಿಷ್ಟ ಅಧಿಕಾರವನ್ನು ಜನತೆಗೆ ನೀಡಿದೆ. |
| ಆ | ಭಾರತ ಚುನಾವಣಾ ಆಯೋಗದ ಸ್ಥಾಪನೆಯ ಸ್ಮರಣಾರ್ಥವಾಗಿ ಪ್ರತಿ ವರ್ಷ ಜನವರಿ 25, ರಾಷ್ಟ್ರಾದ್ಯಂತ ರಾಷ್ಟ್ರೀಯ ಮತದಾರರ ದಿನವನ್ನು [NVD] ಪ್ರಜಾಪ್ರಭುತ್ವದ ಹಬ್ಬವಾಗಿ ಆಚರಿಸಲಾಗುತ್ತಿದೆ. ಈ ಕಾರ್ಯಕ್ರಮದ ಅಂಗವಾಗಿ ಎಲ್ಲಾ ಸರ್ಕಾರಿ/ಅನುದಾನಿತ/ಖಾಸಗಿ ಶೈಕ್ಷಣಿಕ ಸಂಸ್ಥೆಗಳ ಇ.ಎಲ್.ಸಿ ಕೇಂದ್ರಗಳಲ್ಲಿ ಹಾಗೂ ಬ್ಲಾಕ್ ಮತ್ತು ಜಿಲ್ಲಾ ಹಂತಗಳಲ್ಲಿ ಸಂಪನ್ಮೂಲ ಸಾಹಿತ್ಯ ಮಾರ್ಗದರ್ಶನದಲ್ಲಿ ಸೂಚಿಸಲಾಗಿರುವ ವಿಷಯಗಳ ಆಧಾರದಲ್ಲಿ ಹಾಗೂ ಈ ಕಛೇರಿ ತಿಳಿಸಿದಂತೆ ಸ್ಪರ್ಧೆಗಳನ್ನು ಆಯೋಜಿಸಲು ಅಗತ್ಯ ಕ್ರಮವಹಿಸುವುದು. |

6. ಸ್ಪರ್ಧೆಗಳ ಆಯೋಜನೆ:–

ಪ್ರೌಢಶಾಲಾ, ಪದವಿ ಪೂರ್ವ/ ತತ್ಸಮಾನ/, ಚಿತ್ರಕಲಾ, ಎಲ್ಲಾ ಪದವಿ, ತಾಂತ್ರಿಕ ಪದವಿ, ವೈದ್ಯಕೀಯ ಪದವಿ ವಿದ್ಯಾಲಯಗಳಲ್ಲಿ ಹಾಗೂ ಸ್ನಾತಕೋತ್ತರ ವಿಶ್ವವಿದ್ಯಾಲಯಗಳಲ್ಲಿ ಏರ್ಪಡಿಸಬೇಕಾಗಿರುವ ಸ್ಪರ್ಧೆಗಳ ವಿವರಗಳನ್ನು ಅನುಬಂಧ–06 ರಲ್ಲಿ ಒದಗಿಸಿದೆ. ಪ್ರತಿಯೊಂದು ಸ್ಪರ್ಧೆಯಲ್ಲಿ ವಿವಿಧ ಹಂತದಲ್ಲಿ ಆಯ್ಕೆ ಮಾಡಬೇಕಾದ ಕ್ರಮ ಈ ಕೆಳಕಂಡಂತಿದೆ.

i. ನಾಟಕ ಸ್ಪರ್ಧೆ:–

| | |
|---|---|
| ಅ | ಚುನಾವಣಾ ಆಯೋಗದಿಂದ ಒದಗಿಸಲಾಗಿರುವ **"ಓಟು ಹಾಕೋಣ ಬನ್ನಿ"** ನಾಟಕ ಪುಸ್ತಕ ಆಧಾರಿತ ನಾಟಕಗಳನ್ನು ಪ್ರದರ್ಶಿಸುವುದು. ಶಾಲೆ/ ಪದವಿ ಪೂರ್ವ / ಪದವಿ/ ಸ್ನಾತಕೊತ್ತರ / ವೈದ್ಯಕೀಯ / ತಾಂತಿಕ ಶಿಕ್ಷಣ ಸಂಸ್ಥೆ ಹಂತದಲ್ಲಿ ಆಯಾ ಇ.ಎಲ್.ಸಿ ಕೇಂದ್ರಗಳು ಆಯೋಜಿಸುವುದು |

## ii. ಕ್ವಿಜ್ (ರಸಪ್ರಶ್ನೆ) ಸ್ಪರ್ಧೆ:–

| | |
|---|---|
| ಅ | ರಸಪ್ರಶ್ನೆ ಸ್ಪರ್ಧೆಯನ್ನು ಶೈಕ್ಷಣಿಕ ಸಂಸ್ಥೆ / ಬ್ಲಾಕ್ / ಜಿಲ್ಲೆ / ರಾಜ್ಯ ಮಟ್ಟದಲ್ಲಿ ಆಯೋಜಿಸುವುದು |
| ಆ | ಆಯಾ ಶಿಕ್ಷಣ ಸಂಸ್ಥೆಯಲ್ಲಿ ಸ್ಪರ್ಧೆಯನ್ನು ಏರ್ಪಡಿಸಿ ಪ್ರಥಮ, ದ್ವಿತೀಯ ಮತ್ತು ತೃತೀಯ ವಿಜೇತ ತಂಡಗಳಿಗೆ ಬಹುಮಾನ ವಿತರಿಸಿ, ಇದರ ಪಟ್ಟಿಯನ್ನು ಬ್ಲಾಕ್ ಹಂತಕ್ಕೆ ಸಲ್ಲಿಸುವುದು. |
| ಇ | ಶೈಕ್ಷಣಿಕ ಸಂಸ್ಥೆಯಲ್ಲಿ ಪ್ರಥಮ ಸ್ಥಾನ ಪಡೆದ ತಂಡವನ್ನು ಬ್ಲಾಕ್ ಹಂತದ ಸ್ಪರ್ಧೆಗೆ ಆಯ್ಕೆ ಮಾಡುವುದು. |
| ಈ | ಬ್ಲಾಕ್ ಹಂತದಲ್ಲಿ ಸ್ಪರ್ಧೆಯನ್ನು ನಡೆಸಿ, ಪ್ರಥಮ, ದ್ವಿತೀಯ ಮತ್ತು ತೃತೀಯ ಸ್ಥಾನಗಳನ್ನು ಗಳಿಸಿದ ವಿಜೇತ ತಂಡಗಳಿಗೆ ಬಹುಮಾನ ವಿತರಿಸಿ, ಪಟ್ಟಿಯನ್ನು **ಜಿಲ್ಲಾ ಹಂತಕ್ಕೆ** ಸಲ್ಲಿಸುವುದು. |
| ಉ | ಬ್ಲಾಕ್ ಹಂತದಲ್ಲಿ ಪ್ರಥಮ ಸ್ಥಾನ ಪಡೆದ ತಂಡವನ್ನು ಜಿಲ್ಲಾ ಹಂತದ ಸ್ಪರ್ಧೆಗೆ ಆಯ್ಕೆ ಮಾಡುವುದು. |
| ಊ | ಜಿಲ್ಲಾ ಹಂತದಲ್ಲಿ ಸ್ಪರ್ಧೆಯನ್ನು ನಡೆಸಿ, ಪ್ರಥಮ, ದ್ವಿತೀಯ ಮತ್ತು ತೃತೀಯ ಸ್ಥಾನಗಳನ್ನು ಗಳಿಸಿದ ವಿಜೇತ ತಂಡಗಳಿಗೆ ಬಹುಮಾನ ವಿತರಿಸಿ, ಪಟ್ಟಿಯನ್ನು **ರಾಜ್ಯ ಹಂತಕ್ಕೆ** ಸಲ್ಲಿಸುವುದು. |
| ಎ | ಜಿಲ್ಲಾ ಹಂತದ ಸ್ಪರ್ಧೆಗಳಲ್ಲಿ ಪ್ರಥಮ ಸ್ಥಾನದಲ್ಲಿ ವಿಜೇತರಾದ ಸ್ಪರ್ಧಿಗಳಿಗೆ **ರಾಜ್ಯ ಹಂತದಲ್ಲಿ** ಸ್ಪರ್ಧೆಗಳನ್ನು ನಡೆಸಿ, ಪ್ರಥಮ, ದ್ವಿತೀಯ ಮತ್ತು ತೃತೀಯ ಸ್ಥಾನಗಳಿಗೆ ವಿಜೇತರನ್ನು ಆಯ್ಕೆ ಮಾಡಿ ಪ್ರಶಸ್ತಿ ನೀಡಿ ಗೌರವಿಸಲಾಗುವುದು. |

## iii. ಚರ್ಚಾ ಸ್ಪರ್ಧೆಗಳು:–

| | |
|---|---|
| ಅ | ಚರ್ಚಾ ಸ್ಪರ್ಧೆಯನ್ನು ಕನ್ನಡ/ಇಂಗ್ಲೀಷ್ ನಲ್ಲಿ ಶೈಕ್ಷಣಿಕ ಸಂಸ್ಥೆ / ಬ್ಲಾಕ್ / ಜಿಲ್ಲಾ ಮಟ್ಟದಲ್ಲಿ ಆಯೋಜಿಸುವುದು |
| ಆ | ಚರ್ಚಾ ಸ್ಪರ್ಧೆಗೆ ವಿಷಯವನ್ನು ಆಯಾ ಆಯಾ ಮಟ್ಟದಲ್ಲಿ ನಿರ್ಣಯಿಸಿಕೊಳ್ಳುವುದು. |
| ಇ | ಆಯಾ ಶಿಕ್ಷಣ ಸಂಸ್ಥೆಯಲ್ಲಿ ಸ್ಪರ್ಧೆಯನ್ನು ಏರ್ಪಡಿಸಿ ಪ್ರಥಮ, ದ್ವಿತೀಯ ಮತ್ತು ತೃತೀಯ ವಿಜೇತರಿಗೆ ಬಹುಮಾನ ವಿತರಿಸಿ, ಇದರ ಪಟ್ಟಿಯನ್ನು ಬ್ಲಾಕ್ ಹಂತಕ್ಕೆ ಸಲ್ಲಿಸುವುದು.. |
| ಈ | ಶೈಕ್ಷಣಿಕ ಸಂಸ್ಥೆಯಲ್ಲಿ ಪ್ರಥಮ ಸ್ಥಾನ ಪಡೆದ ವಿಜೇತರನ್ನು ಬ್ಲಾಕ್ ಹಂತದ ಸ್ಪರ್ಧೆಗೆ ಆಯ್ಕೆ ಮಾಡುವುದು. |
| ಉ | ಬ್ಲಾಕ್ ಹಂತದಲ್ಲಿ ಸ್ಪರ್ಧೆಯನ್ನು ನಡೆಸಿ, ಪ್ರಥಮ, ದ್ವಿತೀಯ ಮತ್ತು ತೃತೀಯ ಸ್ಥಾನಗಳನ್ನು ಗಳಿಸಿದ ವಿಜೇತರಿಗೆ ಬಹುಮಾನ ವಿತರಿಸಿ, ಪಟ್ಟಿಯನ್ನು **ಜಿಲ್ಲಾ ಹಂತಕ್ಕೆ** ಸಲ್ಲಿಸುವುದು. |
| ಊ | ಬ್ಲಾಕ್ ಹಂತದಲ್ಲಿ ಪ್ರಥಮ ಸ್ಥಾನ ಪಡೆದ ವಿಜೇತರನ್ನು ಜಿಲ್ಲಾ ಹಂತದ ಸ್ಪರ್ಧೆಗೆ ಆಯ್ಕೆ ಮಾಡುವುದು. |
| ಎ | ಜಿಲ್ಲಾ ಹಂತದಲ್ಲಿ ಸ್ಪರ್ಧೆಯನ್ನು ನಡೆಸಿ, ಪ್ರಥಮ, ದ್ವಿತೀಯ ಮತ್ತು ತೃತೀಯ ಸ್ಥಾನಗಳನ್ನು ಗಳಿಸಿದ ವಿಜೇತ ತಂಡಗಳಿಗೆ ಬಹುಮಾನ ವಿತರಿಸಿ, ಪಟ್ಟಿಯನ್ನು **ರಾಜ್ಯ ಹಂತಕ್ಕೆ** ಸಲ್ಲಿಸುವುದು. |

**iv. ಪ್ರಬಂಧ ಸ್ಪರ್ಧೆಗಳು:–**

| | |
|---|---|
| ಅ | ಪ್ರಬಂಧ ಸ್ಪರ್ಧೆಯನ್ನು ಕನ್ನಡ ಮತ್ತು ಆಂಗ್ಲ ಭಾಷೆಯಲ್ಲಿ ಶೈಕ್ಷಣಿಕ ಸಂಸ್ಥೆ / ಬ್ಲಾಕ್ / ಜಿಲ್ಲಾ ಮಟ್ಟದಲ್ಲಿ ಆಯೋಜಿಸುವುದು |
| ಆ | ಪ್ರಬಂಧ ಸ್ಪರ್ಧೆಗೆ ವಿಷಯವನ್ನು ಈ ಕಚೇರಿಯಿಂದ ನೀಡಲಾಗುವುದು |
| ಇ | ಆಯಾ ಶಿಕ್ಷಣ ಸಂಸ್ಥೆಯಲ್ಲಿ ಸ್ಪರ್ಧೆಯನ್ನು ಏರ್ಪಡಿಸಿ ಪ್ರಥಮ, ದ್ವಿತೀಯ ಮತ್ತು ತೃತೀಯ ಸ್ಥಾನ ವಿಜೇತರಿಗೆ ಬಹುಮಾನ ವಿತರಿಸಿ, ಇದರ ಪಟ್ಟಿಯನ್ನು ಬ್ಲಾಕ್ ಹಂತಕ್ಕೆ ಸಲ್ಲಿಸುವುದು. |
| ಈ | ಶೈಕ್ಷಣಿಕ ಸಂಸ್ಥೆಯಲ್ಲಿ ಪ್ರಥಮ ಸ್ಥಾನ ಪಡೆದ ವಿಜೇತರನ್ನು ಬ್ಲಾಕ್ ಹಂತದ ಸ್ಪರ್ಧೆಗೆ ಆಯ್ಕೆ ಮಾಡುವುದು. |
| ಉ | ಬ್ಲಾಕ್ ಹಂತದಲ್ಲಿ ಸ್ಪರ್ಧೆಯನ್ನು ನಡೆಸಿ, ಪ್ರಥಮ, ದ್ವಿತೀಯ ಮತ್ತು ತೃತೀಯ ಸ್ಥಾನಗಳನ್ನು ಗಳಿಸಿದ ವಿಜೇತರಿಗೆ ಬಹುಮಾನ ವಿತರಿಸಿ, ಪಟ್ಟಿಯನ್ನು **ಜಿಲ್ಲಾ ಹಂತಕ್ಕೆ** ಸಲ್ಲಿಸುವುದು. |
| ಊ | ಬ್ಲಾಕ್ ಹಂತದಲ್ಲಿ ಪ್ರಥಮ ಸ್ಥಾನ ಪಡೆದ ವಿಜೇತರನ್ನು ಜಿಲ್ಲಾ ಹಂತದ ಸ್ಪರ್ಧೆಗೆ ಆಯ್ಕೆ ಮಾಡುವುದು. |
| ಎ | ಜಿಲ್ಲಾ ಹಂತದಲ್ಲಿ ಸ್ಪರ್ಧೆಯನ್ನು ನಡೆಸಿ, ಪ್ರಥಮ, ದ್ವಿತೀಯ ಮತ್ತು ತೃತೀಯ ಸ್ಥಾನಗಳನ್ನು ಗಳಿಸಿದ ವಿಜೇತ ತಂಡಗಳಿಗೆ ಬಹುಮಾನ ವಿತರಿಸಿ, ಪಟ್ಟಿಯನ್ನು **ರಾಜ್ಯ ಹಂತಕ್ಕೆ** ಸಲ್ಲಿಸುವುದು. |
| ಏ | ಜಿಲ್ಲಾ ಹಂತದ ಸ್ಪರ್ಧೆಗಳಲ್ಲಿ ಪ್ರಥಮ ಸ್ಥಾನದಲ್ಲಿ ವಿಜೇತರಾದ ಸ್ಪರ್ಧಿಗಳಿಗೆ **ರಾಜ್ಯ ಹಂತದಲ್ಲಿ** ಸ್ಪರ್ಧೆಗಳನ್ನು ನಡೆಸಿ, ಪ್ರಥಮ, ದ್ವಿತೀಯ ಮತ್ತು ತೃತೀಯ ಸ್ಥಾನಗಳಿಗೆ ವಿಜೇತರನ್ನು ಆಯ್ಕೆ ಮಾಡಿ ಪ್ರಶಸ್ತಿ ನೀಡಿ ಗೌರವಿಸಲಾಗುವುದು. |

**v. ಇತರೆ ಸ್ಪರ್ಧೆಗಳು ಚಿತ್ರಕಲೆ/ಪೋಸ್ಟರ್ ಮೇಕಿಂಗ್:–**

| | |
|---|---|
| ಅ | ಚಿತ್ರಕಲೆ/ಪೋಸ್ಟರ್‌ಗಳನ್ನು ಶೈಕ್ಷಣಿಕ ಸಂಸ್ಥೆ, ಬ್ಲಾಕ್, ಜಿಲ್ಲಾ ಮಟ್ಟದಲ್ಲಿ ಆಯೋಜಿಸುವುದು |
| ಆ | ಚಿತ್ರಕಲೆ / ಪೋಸ್ಟರ್ಸ್ ವಿಷಯವನ್ನು ಈ ಕಚೇರಿಯಿಂದ ನೀಡಲಾಗುವುದು |
| ಇ | ಆಯಾ ಶಿಕ್ಷಣ ಸಂಸ್ಥೆಯಲ್ಲಿ ಸ್ಪರ್ಧೆಯನ್ನು ಏರ್ಪಡಿಸಿ ಪ್ರಥಮ, ದ್ವಿತೀಯ ಮತ್ತು ತೃತೀಯ ಸ್ಥಾನ ವಿಜೇತರಿಗೆ ಬಹುಮಾನ ವಿತರಿಸಿ, ಇದರ ಪಟ್ಟಿಯನ್ನು ಬ್ಲಾಕ್ ಹಂತಕ್ಕೆ ಸಲ್ಲಿಸುವುದು. |
| ಈ | ಶೈಕ್ಷಣಿಕ ಸಂಸ್ಥೆಯಲ್ಲಿ ಪ್ರಥಮ ಸ್ಥಾನ ಪಡೆದ ವಿಜೇತರನ್ನು ಬ್ಲಾಕ್ ಹಂತದ ಸ್ಪರ್ಧೆಗೆ ಆಯ್ಕೆ ಮಾಡುವುದು. |
| ಉ | ಬ್ಲಾಕ್ ಹಂತದಲ್ಲಿ ಸ್ಪರ್ಧೆಯನ್ನು ನಡೆಸಿ, ಪ್ರಥಮ, ದ್ವಿತೀಯ ಮತ್ತು ತೃತೀಯ ಸ್ಥಾನಗಳನ್ನು ಗಳಿಸಿದ ವಿಜೇತರಿಗೆ ಬಹುಮಾನ ವಿತರಿಸಿ, ಪಟ್ಟಿಯನ್ನು **ಜಿಲ್ಲಾ ಹಂತಕ್ಕೆ** ಸಲ್ಲಿಸುವುದು. |
| ಊ | ಬ್ಲಾಕ್ ಹಂತದಲ್ಲಿ ಪ್ರಥಮ ಸ್ಥಾನ ಪಡೆದ ವಿಜೇತರನ್ನು ಜಿಲ್ಲಾ ಹಂತದ ಸ್ಪರ್ಧೆಗೆ ಆಯ್ಕೆ ಮಾಡುವುದು. |
| ಎ | ಜಿಲ್ಲಾ ಹಂತದಲ್ಲಿ ಸ್ಪರ್ಧೆಯನ್ನು ನಡೆಸಿ, ಪ್ರಥಮ, ದ್ವಿತೀಯ ಮತ್ತು ತೃತೀಯ ಸ್ಥಾನಗಳನ್ನು ಗಳಿಸಿದ ವಿಜೇತ ತಂಡಗಳಿಗೆ ಬಹುಮಾನ ವಿತರಿಸಿ, ಪಟ್ಟಿಯನ್ನು **ರಾಜ್ಯ** ಹಂತಕ್ಕೆ ಸಲ್ಲಿಸುವುದು. |
| ಏ | ಜಿಲ್ಲಾ ಹಂತದ ಸ್ಪರ್ಧೆಗಳಲ್ಲಿ ಪ್ರಥಮ ಸ್ಥಾನದಲ್ಲಿ ವಿಜೇತರಾದ ಸ್ಪರ್ಧಿಗಳಿಗೆ **ರಾಜ್ಯ** ಹಂತದಲ್ಲಿ ಸ್ಪರ್ಧೆಗಳನ್ನು ನಡೆಸಿ, ಪ್ರಥಮ, ದ್ವಿತೀಯ ಮತ್ತು ತೃತೀಯ ಸ್ಥಾನಗಳಿಗೆ ವಿಜೇತರನ್ನು ಆಯ್ಕೆ ಮಾಡಿ ಪ್ರಶಸ್ತಿ ನೀಡಿ ಗೌರವಿಸಲಾಗುವುದು. |

7. **ಅತ್ಯುತ್ತಮ ಇ.ಎಲ್.ಸಿ ಪುರಸ್ಕಾರ:-**

| | |
|---|---|
| ಅ | ಇ.ಎಲ್.ಸಿ ಸೂಚಿತ ಕಾರ್ಯಚಟುವಟಿಕೆಗಳ ಪರಿಣಾಮಕಾರಿ ಅನುಷ್ಠಾನ, ಅನುಪಾಲನೆ ಹಾಗೂ ಉತ್ತಮ ಆಚರಣೆಗಳು, ಯಶೋಗಾಥೆಗಳು ಮತ್ತು ವಿಶೇಷವಾಗಿ ನೂತನ ಮತದಾರರ ನೋಂದಣಿ ಪ್ರಕ್ರಿಯೆಗಳನ್ನು ಒಳಗೊಂಡ ಮಾನದಂಡಗಳ ಅನ್ವಯ ಪ್ರತಿ ಬ್ಲಾಕ್, ಜಿಲ್ಲೆ, ವಿಭಾಗಗಳಲ್ಲಿ ತಲಾ ಮೂರರಂತೆ ಅತ್ಯುತ್ತಮ ಇಎಲ್‌ಸಿ ಕೇಂದ್ರಗಳನ್ನು ಆಯ್ಕೆ ಮಾಡಲಾಗುವುದು. ರಾಜ್ಯ ಮಟ್ಟದಲ್ಲಿ ಪ್ರೌಢಶಾಲೆ, ಪದವಿಪೂರ್ವ ತತ್ಸಮಾನ, ಪದವಿ ಹಂತಗಳಿಗೆ ಪ್ರತ್ಯೇಕವಾಗಿ ಪ್ರಥಮ, ದ್ವಿತೀಯ ಮತ್ತು ತೃತೀಯ ಸ್ಥಾನಗಳಿಗೆ ಆಯ್ಕೆ ಮಾಡಿ, ಪ್ರಶಸ್ತಿ ಪತ್ರಗಳೊಂದಿಗೆ **"ರಾಷ್ಟ್ರೀಯ ಮತದಾರರ ದಿನದಂದು"** ಸೂಕ್ತ ಪುರಸ್ಕಾರಗಳನ್ನು ನೀಡಲಾಗುವುದು. |

8. **ಕಾರ್ಯಕ್ರಮಗಳ ಉಸ್ತುವಾರಿ ಮತ್ತು ಮೇಲ್ವಿಚಾರಣೆ:-**

I. ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಚುನಾವಣಾಧಿಕಾರಿಗಳು ಈ ಕಾರ್ಯಕ್ರಮದ ಸಂಪೂರ್ಣ ಮೇಲ್ವಿಚಾರಣೆ ಹಾಗೂ ಮಾರ್ಗದರ್ಶನ ಮಾಡುವ ಮೂಲಕ ಕಾರ್ಯಕ್ರಮವನ್ನು ಯಶಸ್ವಿಗೊಳಿಸಲು ಅಗತ್ಯ ಕ್ರಮ ಕೈಗೊಳ್ಳವುದು.

II. ಜಿಲ್ಲಾ SVEEP ಸಮಿತಿಯ ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಗಳಾದ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕಾಧಿಕಾರಿಗಳು ತಮ್ಮ-ತಮ್ಮ ವ್ಯಾಪ್ತಿಯ ಈ ಕೆಳಕಂಡ ಅಧಿಕಾರಿಗಳ ಸಭೆಯನ್ನು ಏರ್ಪಡಿಸಿ ಸೂಕ್ತ ಮಾರ್ಗದರ್ಶನ ನೀಡುವ ಮುಖೇನ ಮೇಲ್ವಿಚಾರಣೆಯನ್ನು ಕೈಗೊಳ್ಳುವುದು.

1) ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕರು (ಆಡಳಿತ),
2) ಪ್ರಾಂಶುಪಾಲರು ಹಾಗೂ ಪದನಿಮಿತ್ತ ಜಿಲ್ಲಾ ಉಪನಿರ್ದೇಶಕರು [ಅಭಿವೃದ್ಧಿ],
3) ಉಪ ನಿರ್ದೇಶಕರು [ಪದವಿ ಪೂರ್ವ],
4) ಕೇಂದ್ರ ಸ್ಥಾನದಲ್ಲಿರುವ ಎಲ್ಲಾ ಪದವಿ, ತಾಂತ್ರಿಕ ಪದವಿ, ವೈದ್ಯಕೀಯ ಪದವಿ/ತತ್ಸಮಾನ ಕಾಲೇಜಿನ ಪ್ರಾಂಶುಪಾಲರು,
5) ಪ್ರತಿ ವಿಶ್ವವಿದ್ಯಾಲಯಗಳ ರಾಜ್ಯಶಾಸ್ತ್ರ/ಮಾನವಿಕ ವಿಜ್ಞಾನ ವಿಭಾಗದ ಮುಖ್ಯಸ್ಥರು.

III. ಉಪನಿರ್ದೇಶಕರು [ಆಡಳಿತ] ಸಾರ್ವಜನಿಕ ಶಿಕ್ಷಣ ಇಲಾಖೆ ಹಾಗೂ ಪ್ರಾಂಶುಪಾಲರು ಹಾಗೂ ಪದನಿಮಿತ್ತ ಉಪನಿರ್ದೇಶಕರು [ಅಭಿವೃದ್ಧಿ] ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ ಇವರುಗಳು ತಮ್ಮ-ತಮ್ಮ ವ್ಯಾಪ್ತಿಯ ಈ ಕೆಳಕಂಡ ಎಲ್ಲಾ ಹಂತದ ಉಸ್ತುವಾರಿ ಅಧಿಕಾರಿಗಳಿಗೆ ಜವಾಬ್ದಾರಿಗಳನ್ನು ನಿಗದಿಪಡಿಸಿ, ಇ.ಎಲ್.ಸಿ ಸಂಚಾಲಕರಿಗೆ ಮೇಲ್ಕಂಡ ಸ್ಪರ್ಧೆಗಳ ಬಗ್ಗೆ ಸೂಕ್ತ ಮಾರ್ಗದರ್ಶನ ಮತ್ತು ತರಬೇತಿಯನ್ನು ನೀಡುವುದು.

1) ಕ್ಷೇತ್ರ ಶಿಕ್ಷಣಾಧಿಕಾರಿಗಳು,
2) ಡಯಟ್ ಹಿರಿಯ ಉಪನ್ಯಾಸಕರು,
3) ಶಿಕ್ಷಣಾಧಿಕಾರಿಗಳು,
4) ಉಪ ಸಮನ್ವಯಾಧಿಕಾರಿಗಳು,
5) ಸಹಾಯಕ ಸಮನ್ವಯಾಧಿಕಾರಿಗಳು,
6) ಕ್ಷೇತ್ರ ಸಮನ್ವಯಾಧಿಕಾರಿಗಳು,
7) ಡಯಟ್ ಉಪನ್ಯಾಸಕರು,
6) ವಿಷಯ ಪರಿವೀಕ್ಷಕರು
7) ಬಿ.ಎಲ್.ಎಂ.ಟಿ/ಡಿ.ಎಲ್.ಎಂ.ಟಿಗಳು ಸೇರಿದಂತೆ

IV. ಉಪನಿರ್ದೇಶಕರು [ಪದವಿ ಪೂರ್ವ ಶಿಕ್ಷಣ ಇಲಾಖೆ] ಇವರು ತಮ್ಮ ಜಿಲ್ಲೆಯ ಪದವಿ ಪೂರ್ವ/ತತ್ಸಮಾನ ಕಾಲೇಜುಗಳ ಪ್ರಾಂಶುಪಾಲರಿಗೆ ಮೇಲ್ಕಂಡ ಸ್ಪರ್ಧೆಗಳ ಬಗ್ಗೆ ಸೂಕ್ತ ಮಾರ್ಗದರ್ಶನ ಮತ್ತು ತರಬೇತಿಯನ್ನು ನೀಡುವುದು.

V. ಕ್ಷೇತ್ರ ಶಿಕ್ಷಣಾಧಿಕಾರಿಗಳು ಮಾಸಿಕ ಸಭೆಯಲ್ಲಿ ಕ್ಷೇತ್ರ ಸಮನ್ವಯಾಧಿಕಾರಿಗಳು, ಪ್ರೌಢಶಾಲಾ ಮುಖ್ಯೋಪಾಧ್ಯಾಯರು, ಇ.ಎಲ್.ಸಿ. ಸಂಚಾಲಕರು, ಶಿಕ್ಷಣ ಸಂಯೋಜಕರು, ಸಂಪನ್ಮೂಲ ವ್ಯಕ್ತಿಗಳು ಹಾಗೂ ಬಿ.ಎಲ್.ಎಂ.ಟಿ. ಇವರೆಲ್ಲರಿಗೂ ಮೇಲ್ಕಂಡ ಸ್ಪರ್ಧೆಗಳ ಬಗ್ಗೆ ಸೂಕ್ತ ಮಾರ್ಗದರ್ಶನ ಮತ್ತು ತರಬೇತಿಯನ್ನು ನೀಡುವುದು.

VI. ಪ್ರತಿ ಶೈಕ್ಷಣಿಕ ಸಂಸ್ಥೆಯ ಮುಖ್ಯಸ್ಥರು/ಪ್ರಾಂಶುಪಾಲರು ತಮ್ಮ ಶಾಲೆ/ ಕಾಲೇಜಿನ ಇ.ಎಲ್.ಸಿ.ಯನ್ನು ಭಾರತ ಚುನಾವಣಾ ಆಯೋಗದ ಅಂತರ್ಜಾಲದಲ್ಲಿ ನೋಂದಾಯಿಸಿ ಸಂಪನ್ಮೂಲ ಸಾಹಿತ್ಯ ಮಾರ್ಗದರ್ಶಿಯಲ್ಲಿರುವ ಎಲ್ಲಾ ಚಟುವಟಿಕೆಗಳನ್ನು ಮಾಸಿಕವಾಗಿ ಮಕ್ಕಳ/ಯುವ ಮತದಾರರಲ್ಲಿ ಚುನಾವಣೆ ಮತ್ತು ಮತದಾನದ ಬಗ್ಗೆ ಅರಿವು ಮೂಡಿಸುವ ಇಎಲ್‌ಸಿ ಚಟುವಟಿಕೆಗಳನ್ನು ಇಎಲ್‌ಸಿ ಸಂಚಾಲಕರು ಪ್ರತಿ ತರಗತಿಯ/ವಿಭಾಗದ ವಿದ್ಯಾರ್ಥಿ/ನಿಯರಿಗೆ ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವುದರ ಬಗ್ಗೆ ಮೇಲ್ವಿಚಾರಣೆ ಮತ್ತು ಉಸ್ತುವಾರಿ ಮಾಡುವುದು. ಅಲ್ಲದೆ ಮೇಲ್ಕಂಡ ಸ್ಪರ್ಧೆಗಳ ಬಗ್ಗೆ ಸೂಕ್ತ ಮಾರ್ಗದರ್ಶನ ಮತ್ತು ತರಬೇತಿಯನ್ನು ನೀಡುವುದು.

VII. ಇಎಲ್‌ಸಿ ಸಂಚಾಲಕರು ತಮ್ಮ ತಮ್ಮ ವ್ಯಾಪ್ತಿಯ ಶಾಲೆ/ಕಾಲೇಜುಗಳಲ್ಲಿ ಇಎಲ್‌ಸಿಗಳನ್ನು ಭಾರತ ಚುನಾವಣಾ ಆಯೋಗದ ಅಂತರ್ಜಾಲದಲ್ಲಿ ನೋಂದಾಯಿಸಿ, ವಿದ್ಯಾರ್ಥಿ/ನಿಯರಿಗೆ, ಸಂಪನ್ಮೂಲ ಮಾರ್ಗದರ್ಶಿ ಸಾಹಿತ್ಯಗಳ ಮಾರ್ಗಸೂಚಿಗಳನ್ವಯ ಇಎಲ್‌ಸಿ ಕಾರ್ಯ ಚಟುವಟಿಕೆಗಳನ್ನು ಮಾಸಿಕವಾಗಿ ಕೈಗೊಂಡು ಶೇಕಡ 100 ರಷ್ಟು ಪ್ರಗತಿ ಸಾಧಿಸಲು ಕ್ರಮವಹಿಸುವುದು.

**ಈ ಕಛೇರಿ ಸುತ್ತೋಲೆ ಸಂಖ್ಯೆ ಸಿಆಸುಇ/15/SVEEP/2023 ದಿನಾಂಕ: 19ನೇ ಜೂನ್ 2023ರ ಅನುಬಂಧ– 5**

2023–24 ನೇ ಸಾಲಿನಲ್ಲಿ ಚುನಾವಣಾ ಜಾಗೃತಿ ಸಂಘಗಳಲ್ಲಿ ಅನುಷ್ಠಾನಗೊಳಿಸಬೇಕಾದ ಕಾರ್ಯಚಟುವಟಿಕೆಗಳ ವಿವರಗಳು

ಆಯಾ ತಾಲ್ಲೂಕಿನ ತಹಸೀಲ್ದಾರರು ಚುನಾವಣಾ ಜಾಗೃತಿ ಸಂಬಂಧ ಮತಗಟ್ಟೆ ಕೇಂದ್ರಗಳಲ್ಲಿ ಈ ಕೆಳಕಂಡ ಕ್ರಮಗಳನ್ನು ಜರುಗಿಸುವುದು.

I. ಚುನಾವಣಾ ಜಾಗೃತಿ ಸಂಘಗಳನ್ನು ಪ್ರಾರಂಭಿಸುವುದು. ಆಯಾ ಸಂಚಾಲಕರು /ಬಿ.ಎಲ್.ಓ.ಗಳಿಗೆ ತರಬೇತಿ ನೀಡಿರುವುದನ್ನು ಖಾತರಿ ಪಡಿಸಿಕೊಳ್ಳುವುದು.

II. ಪೂರ್ಣ ಪ್ರಮಾಣದ ಯಶಸ್ಸಿಗಾಗಿ 2023–24ನೇ ಸಾಲಿನಲ್ಲಿ ತಮ್ಮ ವ್ಯಾಪ್ತಿಯಲ್ಲಿನ ಎಲ್ಲಾ ಮತಗಟ್ಟೆ ಕೇಂದ್ರಗಳಲ್ಲಿ ಚುನಾವಣಾ ಜಾಗೃತಿ ಸಂಘಗಳನ್ನು ಪ್ರಾರಂಭಿಸುವುದು. ಆಯಾ ಬಿ.ಎಲ್.ಓ.ಗಳನ್ನು ಸಂಚಾಲಕರನ್ನಾಗಿ ನೇಮಕ ಮಾಡಿ, ಸಂಪನ್ಮೂಲ ಮಾರ್ಗದರ್ಶಿಯನ್ವಯ ಅಗತ್ಯ ತರಬೇತಿ ನೀಡಲು ಕ್ರಮವಹಿಸುವುದು.

III. ಸಿ.ಜೆ.ಸಿ ಸಂಚಾಲಕರಾದ ಬಿ.ಎಲ್.ಓ ಗಳಿಗೆ ಚುನಾವಣಾ ಜಾಗೃತಿ ಸಂಘಗಳನ್ನು ಭಾರತ ಚುನಾವಣಾ ಆಯೋಗದ ಅಂತರ್ಜಾಲದಲ್ಲಿ ನೋಂದಾಯಿಸಿ ಕಾಲಕಾಲಕ್ಕೆ ಸೂಚಿತ ಚಟುವಟಿಕೆಗಳನ್ನು ಹಮ್ಮಿಕೊಳ್ಳಲು ಅಗತ್ಯ ಕ್ರಮ ಕೈಗೊಳ್ಳುವುದು.

IV. ಡಯಟ್ ಮೂಲಕ ನೀಡುವ ತರಬೇತಿ ಕಾರ್ಯಕ್ರಮಗಳಿಗೆ ಕಡ್ಡಾಯವಾಗಿ ಶೇಕಡ 100ರಷ್ಟು ಹಾಜರಾಗಲು ಹಾಗೂ ತದನಂತರ ಅನುಷ್ಠಾನಗೊಳಿಸಲು ಸೂಕ್ತ ಮೇಲ್ವಿಚಾರಣೆ ಮತ್ತು ಮಾರ್ಗದರ್ಶನ ನೀಡುವುದು.

V. ಸಿಜೆಸಿ ಸಂಚಾಲಕರು ತಮ್ಮ ತಮ್ಮ ವ್ಯಾಪ್ತಿಯ ಬೂತ್ ಹಂತದಲ್ಲಿ ಇರುವ ಸಿಜೆಸಿಗಳನ್ನು ಭಾರತ ಚುನಾವಣಾ ಆಯೋಗದ ಅಂತರ್ಜಾಲದಲ್ಲಿ ನೋಂದಾಯಿಸಿ, ಯುವ ಮತ್ತು ಭವಿಷ್ಯ ಮತದಾರರಿಗೆ ಸಂಪನ್ಮೂಲ ಮಾರ್ಗದರ್ಶಿ ಸಾಹಿತ್ಯಗಳ ಮಾರ್ಗಸೂಚಿಗಳನ್ವಯ ಕಾರ್ಯ ಚಟುವಟಿಕೆಗಳನ್ನು ಮಾಸಿಕವಾಗಿ ಕೈಗೊಂಡು ಶೇಕಡ 100 ರಷ್ಟು ಪ್ರಗತಿ ಸಾಧಿಸಲು ಕ್ರಮವಹಿಸುವುದು.

VI. ಸಿ.ಜೆ.ಸಿ ಸಂಚಾಲಕರ ತರಬೇತಿ ಕಾರ್ಯಕ್ರಮ:–

| | |
|---|---|
| ಅ | 2022–23ನೇ ಸಾಲಿನಲ್ಲಿ ಎಲ್ಲಾ ಸಿ.ಜೆ.ಸಿ ಸಂಚಾಲಕರು/ಬಿ.ಎಲ್.ಓಗಳಿಗೆ ತರಬೇತಿಯನ್ನು ನೀಡಲು ಸೂಚಿಸಲಾಗಿತ್ತು. ಆದರೆ ಕೆಲವು ಕಡೆ ವಿವಿಧ ಕಾರಣಗಳಿಂದ ಪೂರ್ಣ ಪ್ರಮಾಣದಲ್ಲಿ ನೀಡಲು ಸಾಧ್ಯವಾಗಿರುವುದಿಲ್ಲ. ಈ ಹಿನ್ನೆಲೆಯಲ್ಲಿ ಬ್ಲಾಕ್ ಮತ್ತು ಜಿಲ್ಲೆಗಳಲ್ಲಿ ತರಬೇತಿ ಪಡೆಯದಿರುವ ಇ.ಎಲ್.ಸಿ ಸಂಚಾಲಕರು, ರಾಯಭಾರಿಗಳಿಗೆ/ಸಿ.ಜೆಸಿ.ಯ ಬಿ.ಎಲ್.ಓ.ಗಳಿಗೆ ತರಬೇತಿಯನ್ನು ಆಯಾ ಹಂತದಲ್ಲಿ ಆಯೋಜಿಸಿ ಪೂರ್ಣಗೊಳಿಸಲು ಅಗತ್ಯ ಕ್ರಮವಹಿಸುವುದು. |
| ಆ | ಹೊಸದಾಗಿ ಪ್ರಾರಂಭಿಸುತ್ತಿರುವ ಸಿ.ಜೆ.ಸಿ ಕೇಂದ್ರಗಳ ಸಂಚಾಲಕರು ಮತ್ತು ಬಿಎಲ್ಓಗಳಿಗೂ ಸಹ ತರಬೇತಿಯನ್ನು ನೀಡುವುದು. |

VII. ರಾಷ್ಟ್ರೀಯ ಮತದಾರ ದಿನ [National Voters' Day] ಆಚರಣೆ:–

| | |
|---|---|
| ಅ | ನಮ್ಮ ದೇಶವು ವಿಶ್ವದಲ್ಲಿಯೇ ಅತ್ಯಂತ ಬೃಹತ್ ಪ್ರಜಾಸತ್ತಾತ್ಮಕ ರಾಷ್ಟ್ರವಾಗಿದ್ದು, ಚುನಾವಣೆ ಮತ್ತು ಮತದಾನ ಪ್ರಕ್ರಿಯೆಗಳು ಜನಪ್ರತಿನಿಧಿಗಳ ಮೂಲಕ ಪ್ರಜೆಗಳೇ ಸರ್ಕಾರವನ್ನು ರಚಿಸುವ ವಿಶಿಷ್ಟ ಅಧಿಕಾರವನ್ನು ಜನತೆಗೆ ನೀಡಿದೆ. |
| ಆ | ಭಾರತ ಚುನಾವಣಾ ಆಯೋಗದ ಸ್ಥಾಪನೆಯ ಸ್ಮರಣಾರ್ಥವಾಗಿ ಪ್ರತಿ ವರ್ಷ ಜನವರಿ 25, ರಾಷ್ಟ್ರಾದ್ಯಂತ ರಾಷ್ಟ್ರೀಯ ಮತದಾರರ ದಿನವನ್ನು [NVD] ಪ್ರಜಾಪ್ರಭುತ್ವದ ಹಬ್ಬವಾಗಿ ಆಚರಿಸಲಾಗುತ್ತಿದೆ. ಈ ಕಾರ್ಯಕ್ರಮದ ಅಂಗವಾಗಿ ಸಿ.ಜೆ.ಸಿ ಕೇಂದ್ರಗಳಲ್ಲಿ ಹಾಗೂ ಬ್ಲಾಕ್ ಮತ್ತು ಜಿಲ್ಲಾ ಹಂತಗಳಲ್ಲಿ ಸಂಪನ್ಮೂಲ ಸಾಹಿತ್ಯ ಮಾರ್ಗದರ್ಶನದಲ್ಲಿ ಸೂಚಿಸಲಾಗಿರುವ ವಿಷಯಗಳ ಆಧಾರದಲ್ಲಿ ಹಾಗೂ ಈ ಕಛೇರಿ ತಿಳಿಸಿದಂತೆ ಸ್ಪರ್ಧೆಗಳನ್ನು ಆಯೋಜಿಸಲು ಅಗತ್ಯ ಕ್ರಮವಹಿಸುವುದು. |

**ಕಛೇರಿ ಸುತ್ತೋಲೆ ಸಂಖ್ಯೆ: ಸಿಆಸುಇ/15/SVEEP/2023, ದಿನಾಂಕ: 19ನೇ ಜೂನ್ 2023ರ ಅನುಬಂಧ–06**

**ರಾಷ್ಟ್ರೀಯ ಮತದಾರರ ದಿನಾಚರಣೆ ಪ್ರಯುಕ್ತ ಮತದಾರರ ಸಾಕ್ಷರತಾ ಸಂಘಗಳಲ್ಲಿ ಆಯೋಜಿಸಬೇಕಾದ ಸ್ಪರ್ಧೆಗಳ ವಿವರಗಳು**

| ಕ್ರ.ಸಂ | ಹಂತ | ಸ್ಪರ್ಧೆಯ ವಿವರ | ಸ್ಪರ್ಧೆ ನಡೆಸಬೇಕಾದ ವಿವರಗಳು |
|---|---|---|---|
| 1 | ಪ್ರೌಢ/ ಪದವಿ ಪೂರ್ವ/ ಪದವಿ ಪ್ರತ್ಯೇಕವಾಗಿ | ನಾಟಕ ಪ್ರದರ್ಶನ [ಓಟು ಹಾಕೋಣ ಬನ್ನಿ] School Play/ Skit | ಶಾಲೆ / ಸಂಸ್ಥೆ ಹಂತದ ಸ್ಪರ್ಧೆಗಳನ್ನು ಸೆಪ್ಟಂಬರ್ ಮಾಹೆಯಲ್ಲಿ ನಿರ್ವಹಿಸುವುದು<br>ಬ್ಲಾಕ್ ಹಂತದಲ್ಲಿ ಈ ಸ್ಪರ್ಧೆಗಳನ್ನು ಅಕ್ಟೋಬರ್ ಮಾಹೆಯಲ್ಲಿ ನಿರ್ವಹಿಸುವುದು<br>ಜಿಲ್ಲಾ ಹಂತದಲ್ಲಿ ಈ ಸ್ಪರ್ಧೆಗಳನ್ನು ನವೆಂಬರ್ ಮಾಹೆಯಲ್ಲಿ ಆಯೋಜಿಸುವುದು<br>ಜಿಲ್ಲಾ ಮಟ್ಟದ ವಿಜೇತ ಸ್ಪರ್ಧಿಗಳಿಗೆ ನವೆಂಬರ್ 14 ರ ಮಕ್ಕಳ ದಿನಾಚರಣೆಯ ಸಂದರ್ಭದಲ್ಲಿ ಆಯಾ ಹಂತದ ವಿಜೇತರಿಗೆ ಆಯಾ ಹಂತದಲ್ಲಿ ಬಹುಮಾನ/ಪ್ರಶಸ್ತಿಪತ್ರ ವಿತರಣೆಗೆ ಅಗತ್ಯ ಕ್ರಮವಹಿಸುವುದು.<br>ರಾಜ್ಯ ಮಟ್ಟದ ಸ್ಪರ್ಧೆಗಳನ್ನು ಡಿಸೆಂಬರ್ ಮಾಹೆಯಲ್ಲಿ ನಿರ್ವಹಿಸಲಾಗುವುದು.<br>ರಾಜ್ಯ ಮಟ್ಟದ ವಿಜೇತ ಸ್ಪರ್ಧಿಗಳಿಗೆ ಜನವರಿ 25, 2024 ರ 'ರಾಷ್ಟ್ರೀಯ ಮತದಾರರ ದಿನಾಚರಣೆ' ಸಂದರ್ಭದಲ್ಲಿ ಬಹುಮಾನ/ಪ್ರಶಸ್ತಿಪತ್ರ ವಿತರಣೆ ಮಾಡಲಾಗುವುದು. |
| 2 | ಪ್ರೌಢ ಶಾಲೆ | 1) ಚರ್ಚಾಸ್ಪರ್ಧೆ<br>2) ಕ್ವಿಜ್<br>3) ಪ್ರಬಂಧ ಸ್ಪರ್ಧೆ<br>4) ಚಿತ್ರಕಲೆ ಮತ್ತು ಪೋಸ್ಟರ್ಸ್ ಮಾಡುವುದು | |
| 3 | ಪದವಿ ಪೂರ್ವ/ ತತ್ಸಮಾನ ವಿದ್ಯಾಲಯಗಳು | 1) ಚರ್ಚಾಸ್ಪರ್ಧೆ<br>2) ಪ್ರಬಂಧ ಸ್ಪರ್ಧೆ<br>3) ಕ್ವಿಜ್ | |
| 5 | ಪದವಿ/ಸ್ನಾತಕೊತ್ತರ ತತ್ಸಮಾನ ವಿದ್ಯಾಲಯಗಳು/ ವಿಶ್ವವಿದ್ಯಾಲಯಗಳು | 1) ಚರ್ಚಾಸ್ಪರ್ಧೆ<br>2) ಪ್ರಬಂಧ ಸ್ಪರ್ಧೆ<br>3) ಕ್ವಿಜ್ | |